ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 27 ಚಾ ಸಾ 48

ಹೆಸರುಃ ಅಪ್ಪು

ತಂದೆಯ ಹೆಸರುಃ ರಾಜು

ವಯಸ್ಸುಃ 28 ವರ್ಷ

ಉದ್ಯೋಗಃ ಮೀನು ಹಿಡಿಯುವುದು ಮತ್ತು ಈಜುಗಾರ .

ವಾಸಃ ಕೆ ಆರ್ ಎಸ್

ದಿಃ 21.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ಗಂಗಾರಾಮುರವರ ಹೆಂಡತಿ ಲಕ್ಷ್ಮಿ ಕೆ ಆರ್ ಸಾಗರದ ನಿವಾಸಿ . ಆಕೆಯನ್ನು ಕೊಲೆ ಮಾಡಲಾಗಿದೆ .

2. ಸುಮಾರು 2-3 ವರುಷದ ಹಿಂದೆ ಕೆ ಆರ್ ಸಾಗರ ಪೊಲೀಸರು ನಮ್ಮನ್ನು ಠಾಣೆಗೆ ಕರೆಯಿಸಿದ್ದರು . ಆ ರೀತಿ ನಾನು ಹೋದಾಗ ಪೊಲೀಸ್ ಠಾಣೆಯಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿ ಇದ್ದರು .

3. ಸದರಿ ಲಕ್ಷ್ಮಿಯು ಗಂಗಾರಾಮುವಿನ ಹೆಂಡತಿ ಲಕ್ಷ್ಮಿ ಮತ್ತು 4 ಜನ ಮಕ್ಕಳನ್ನು ಕೊಲೆ ಮಾಡಿದ್ದಾಳೆ ಎಂದು ಆಕೆಯನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದರು.

4. ಸದರಿ ಲಕ್ಷ್ಮಿಯು ಪೊಲೀಸರ ಮುಂದೆ ಹೇಳಿಕೆಯನ್ನು ಕೊಡುವಾಗ ತಾನು ಲಕ್ಷ್ಮಿ ಮತ್ತು 4 ಜನ ಮಕ್ಕಳನ್ನು ಕೊಲೆ ಮಾಡುವ ಸಂದರ್ಭದಲ್ಲಿ ಧರಿಸಿದ್ದ ಬಟ್ಟೆಗಳನ್ನು ಮತ್ತು ಸುತ್ತಿಗೆಯನ್ನು ಬೆಳವತ್ತದಲ್ಲಿ ಇರುವ ಕಾಲುವೆಗೆ ಎಸೆದಿದ್ದೇನೆ. ನನ್ನ ಜೊತೆಯಲ್ಲಿ ಬಂದರೆ ಆ ಕಾಲುವೆಯನ್ನು ತೋರಿಸುತ್ತೇನೆ ಎಂದು ತಿಳಿಸಿದ ಮೇರೆಗೆ ಪೊಲೀಸರು, ಆರೋಪಿ ಲಕ್ಷ್ಮಿ ಮತ್ತು ನಾವು ಪೊಲೀಸರ ವಾಹನದಲ್ಲಿ ಬೆಳವತ್ತದ ಕಾಲುವೆಯ ಬಳಿ ಹೋದಾಗ ಆರೋಪಿ ಲಕ್ಷ್ಮಿಯು ಸೇತುವೆ ಮೇಲೆ ನಿಂತುಕೊಂಡು ಬಟ್ಟೆಗಳನ್ನು ಮತ್ತು ಸುತ್ತಿಗೆಯನ್ನು ಎಸೆದ ಕಾಲುವೆಯ ಜಾಗವನ್ನು ತೋರಿಸಿಕೊಟ್ಟಳು .

5. ಆ ರೀತಿ ನಾವು ನೋಡಿದಾಗ ಆ ಕಾಲುವೆಯಲ್ಲಿ ಸುಮಾರು ಒಂದೂವರೆ ಅಡಿಯಷ್ಟು ಆಳದ ನೀರು ಹರಿಯುತ್ತಿತ್ತು. ನಾನು ಸುಮಾರು ಬಟ್ಟೆಗಳನ್ನು ಎತ್ತಿ ತೋರಿಸಿದೆ . ಅವುಗಳ ಪೈಕಿ ಆರೋಪಿಯು ಒಂದು

ಸ್ಯಾರಿ , ಒಂದು ಲಂಗ , ಒಂದು ವೇಲ್ , ಒಂದು ರವಿಕೆಯನ್ನು ತನ್ನದ್ದು ಎಂದು ಗುರುತಿಸಿದಳು. ಆನಂತರ ಅಲ್ಲೇ ಪಕ್ಕದಲ್ಲಿ ಇದ್ದ ಒಂದು ಸುತ್ತಿಗೆಯನ್ನು ನಾನು ತೆಗೆದು ತೋರಿಸಿದಾಗ ಅದನ್ನು ಕೂಡ ಆಕೆ ಗುರುತಿಸಿದಳು .

6. ಸದರಿ ನಾಲ್ಕು ಬಟ್ಟೆಗಳನ್ನು ಮತ್ತು ಸುತ್ತಿಗೆಯನ್ನು ಆರೋಪಿ ಗುರುತಿಸಿದ ಕಾರಣಕ್ಕಾಗಿ ಅವುಗಳನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿದ್ದಾರೆ .

7. ಸದರಿ ಬಟ್ಟೆಗಳನ್ನು ಮತ್ತು ಸುತ್ತಿಗೆಯನ್ನು ನೋಡಿದರೆ ಗುರುತಿಸುತ್ತೇನೆ.

8. ಆ ಸಂದರ್ಭದಲ್ಲಿ ಪೊಲೀಸರು ನಿಪಿ 18ರಂತೆ 10 ಪೊಟೋಗಳನ್ನು ತೆಗೆದಿರುತ್ತಾರೆ . ಸದರಿ ಪೊಟೋಗಳ ಪೈಕಿ 3ನೇ ಪೊಟೋದಲ್ಲಿ ನೀರಿನಲ್ಲಿ ವಸ್ತುಗಳನ್ನು ಹುಡುಕುತ್ತಿರುವ ವ್ಯಕ್ತಿ ನಾನು . ಅದೇ ರೀತಿ ನಾಲ್ಕನೇ ಪೊಟೋದಲ್ಲಿ ಒಂದು ಕೈಯಲ್ಲಿ ಬಟ್ಟೆ ಮತ್ತು ಸುತ್ತಿಗೆಯನ್ನು ಹಿಡಿದಿರುವ ಮತ್ತು ಉಳಿದ ಪೊಟೋಗಳನ್ನು ಬಟ್ಟೆಗಳನ್ನು ತೆಗೆದು ತೋರಿಸುತ್ತಿರುವ ವ್ಯಕ್ತಿ ನಾನು.

9. ಸದರಿ ಸುತ್ತಿಗೆ ನ್ಯಾಯಾಲಯದ ಮುಂದಿರುವ ಮು.ಮಾ 19 ಆಗಿದೆ . ಬಟ್ಟೆಗಳು ಮು.ಮಾ 20 ರಿಂದ 23 ಆಗಿವೆ .

ಪಾಟೀ ಸವಾಲುಃ ಮುಂದೂಡಿದೆ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)